ಪ್ರತಿಬಿಂಬ

**PRATIBIMBA –Multidisciplinary Kannada Research Journal of IIMRD**
**ISSN: 2582-2284**
**Vol-7 Issue-1, July-August 2025, Pp. 22-28**
**©*IIMRD*, Mysuru**
**www.iimrd.com**

# ಕನ್ನಡ ಸಿನಿಮಾಗಳಲ್ಲಿ ಎಸ್. ನಾರಾಯಣ್ ಅವರ ನಿರ್ದೇಶನದ ಚಲನಚಿತ್ರಗಳ ವಿಷಯ ವಿಶ್ಲೇಷಣೆ: ಸಿಂಹಾದ್ರಿಯ ಸಿಂಹ ಚಲನಚಿತ್ರವನ್ನು ಅನುಲಕ್ಷಿಸಿ

**ಆರ್. ಅಶೋಕ್ ನಾಯಕ ಕುಡತಿನಿ**

ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ ವಿಭಾಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**ಸಾರಾಂಶ: (Abstract)**

*ಇಂದಿನ ಆಧುನಿಕ ಯುಗದಲ್ಲಿ ಚಲನಚಿತ್ರದ ಕ್ಷೇತ್ರದಲ್ಲಿ ಕೆಲಸ ಮಾಡುವವರ ಪರಿಸ್ಥಿತಿ ಸಾಮಾನ್ಯ ಜನರ ಪರಿಸ್ಥಿತಿಗೆ ಹೋಲಿಸಿದರೆ ಬೇರೆಯಾಗಿಲ್ಲ ಅವರ ಜೀವನದ ಪರಿಸ್ಥಿತಿ ಇಂದು ಆಯೋಮಯವಾಗಿದೆ. ಪ್ರಸ್ತುತ ಲೇಖನದಲ್ಲಿ ಎಸ್. ನಾರಾಯಣ್ ಅವರ ನಿರ್ದೇಶನದ ಚಲನಚಿತ್ರಗಳ ವಿಷಯ ವಿಶ್ಲೇಷಣೆ ಮಾಡಲಾಗಿದೆ. ಎಸ್. ನಾರಾಯಣ್ ಅವರು ತಮ್ಮ ನಿರ್ದೇಶನದ ಚಿತ್ರಗಳಲ್ಲಿ ಸಾಮಾಜಿಕ ಸಂದೇಶ ರವಾನಿಸುವಲ್ಲಿ ಯಶಸ್ವಿಯಾಗಿದ್ದಾರೆ ಎಂಬುವುದರಲ್ಲಿ ಎರಡು ಮಾತಿಲ್ಲ. ಬಹುತೇಕ ಅವರ ನಿರ್ದೇಶನದ ಎಲ್ಲಾ ಸಿನಿಮಾಗಳಲ್ಲಿ ಸಾಮಾಜಿಕ ಸಂದೇಶಗಳನ್ನು ರವಾನೆಯಾಗುತ್ತವೆ.*

**ಮುಖ್ಯಪದಗಳು (Keywords):** ಕನ್ನಡ ಚಲನಚಿತ್ರ, ಎಸ್.ನಾರಾಯಣ್, ನಿರ್ದೇಶಕ, ಸಿಂಹಾದ್ರಿಯ ಸಿಂಹ, ಸೂರ್ಯವಂಶ.

**ಪೀಠಿಕೆ**

ಎಸ್. ನಾರಾಯಣ್ ರವರು ಕನ್ನಡ ಚಿತ್ರರಂಗದ ಅದ್ಭುತ ನಿರ್ದೇಶಕರರಲ್ಲಿ ಒಬ್ಬರು. ಅವರು ತಮ್ಮ ಚಿತ್ರಗಳಲ್ಲಿ ಮಹಿಳೆಯರ ಪರಿಸ್ಥಿತಿ, ಸಮಸ್ಯೆಗಳು, ಸವಾಲುಗಳನ್ನು ಉತ್ತಮ ರೀತಿಯಲ್ಲಿ ತೋರಿಸುತ್ತಾರೆ. ಅದೇ ರೀತಿ ಭಾರತೀಯ ಮಹಿಳೆಯರ ಸಂಸ್ಕೃತಿಯಾದ ಮೈತುಂಬಾ ಸೀರೆ, ಮುಡಿಗೆ ಹೂ, ಹಣೆಗೆ ಅಗಲವಾದ ಸಿಂದೂರ, ಕೈಬಳೆ, ಕಾಲ್ಗೆಜ್ಜೆ ಈ ರೀತಿಯಾಗಿ ತೋರಿಸಿದ್ದಾರೆ. ಎಸ್. ನಾರಾಯಣ್ ರವರು ಮಹಿಳೆಯರನ್ನು ತಮ್ಮ ಚಲನಚಿತ್ರಗಳಲ್ಲಿ ಬಳಸಿಕೊಂಡಿರುವ ರೀತಿ ತುಂಬಾ ಉತ್ತಮವಾಗಿದೆ.

ಭಾರತ ದೇಶ ಸಂಸ್ಕೃತಿಗಳ ಊರಾಗಿದೆ ಇಲ್ಲಿ ಕಲೆ, ಸಂಸ್ಕೃತಿ, ಆಚಾರ, ವಿಚಾರಗಳಿಗೆ ತನ್ನದೇ ಆದ ಸ್ಥಾನಮಾನವನ್ನು ಉಳಿಸಿಕೊಂಡು ಬಂದಿದೆ ಇದನ್ನು ಎಸ್. ನಾರಾಯಣ್ ಅವರ ನಿರ್ದೇಶನದ ಚಲನಚಿತ್ರಗಳು ಅನಾವರಣ ಮಾಡುತ್ತವೆ. ಇದಲ್ಲದೆ ಎಸ್. ನಾರಾಯಣ್ ಅವರ ನಿರ್ದೇಶನದ ಚಲನಚಿತ್ರಗಳಲ್ಲಿ ಗ್ರಾಮೀಣ ಸೊಗಡನ್ನು ಹೆಚ್ಚಾಗಿ ಚಿತ್ರೀಕರಿಸಿರುವುದರ ಜೊತೆಗೆ ಅವರ ನಿರ್ದೇಶನದ ಚಲನಚಿತ್ರಗಳಲ್ಲಿ ಗ್ರಾಮೀಣ ಬದುಕನ್ನು ಪ್ರೇಕ್ಷಕರಿಗೆ ಅನಾವರಣ ಮಾಡಿದ್ದಾರೆ. ಇಂದಿನ ಕಾಲದ ಗ್ರಾಮೀಣ

*Please cite this article as:* ಅಶೋಕ್ ನಾಯಕ ಕುಡತಿನಿ, ಆರ್. (2025). ಕನ್ನಡ ಸಿನಿಮಾಗಳಲ್ಲಿ ಎಸ್. ನಾರಾಯಣ್ ಅವರ ನಿರ್ದೇಶನದ ಚಲನಚಿತ್ರಗಳ ವಿಷಯ ವಿಶ್ಲೇಷಣೆ: ಸಿಂಹಾದ್ರಿಯ ಸಿಂಹ ಚಲನಚಿತ್ರವನ್ನು ಅನುಲಕ್ಷಿಸಿ. ಪ್ರತಿಬಿಂಬ: *ಮಲ್ಟಿಡಿಸಿಪ್ಲಿನರಿ ಕನ್ನಡ ರೀಸರ್ಚ್ ಜರ್ನಲ್ ಆಫ್ ಐಐಎಂಆರ್‌ಡಿ, 7(1). ಪು.ಸಂ.* 22–28

ಜನರು ಯಾವ ರೀತಿ ತಮ್ಮ ಬದುಕನ್ನು ಕಟ್ಟಿಕೊಳ್ಳುತ್ತಾರೆ ಎಂಬುದನ್ನು ತಮ್ಮ ಚಿತ್ರಗಳಲ್ಲಿ ಉತ್ತಮವಾಗಿ ತಮ್ಮ ನಿರ್ದೇಶನದ ಮೂಲಕ ತೋರಿಸಲಾಗಿದೆ.

**ಅಧ್ಯಯನದ ಉದ್ದೇಶಗಳು**

- ಎಸ್. ನಾರಾಯಣ್ ನಿರ್ದೇಶನದ ಕನ್ನಡ ಚಿತ್ರಗಳು ಸಾಮಾಜಿಕ ಸಂದೇಶಗಳು ಹೊಂದಿವೆಯೇ ಎಂಬುದನ್ನು ಅಧ್ಯಯನ ಮಾಡುವುದು.
- ಪ್ರಸ್ತುತ ಆಧುನಿಕ ಮಾಧ್ಯಮಗಳ ಪ್ರಭಾವದಿಂದ ಚಲನಚಿತ್ರಗಳ ಪ್ರಾಧಾನ್ಯತೆ ಕ್ಷೀಣಿಸುತ್ತಿದೆಯೆ ಎಂಬುದನ್ನು ತಿಳಿದುಕೊಳ್ಳುವುದು
- ಎಸ್. ನಾರಾಯಣ್ ರವರ ನಿರ್ದೇಶನದ ಚಿತ್ರಗಳಲ್ಲಿ ರಾಜಕೀಯ ಸನ್ನಿವೇಶ ಚಿತ್ರಣವನ್ನು ತಿಳಿದುಕೊಳ್ಳುವುದು

**ವಿಷಯ ಮಂಡನೆ**

ಇಂದಿನ ಆಧುನಿಕ ಯುಗದಲ್ಲಿ ಚಲನಚಿತ್ರದ ಕ್ಷೇತ್ರದಲ್ಲಿ ಕೆಲಸ ಮಾಡುವವರು ಪರಿಸ್ಥಿತಿ ಸಾಮಾನ್ಯ ಜನರ ಪರಿಸ್ಥಿತಿಗೆ ಹೋಲಿಸಿದರೆ ಬೇರೆಯಾಗಿಲ್ಲ ಇಂದು ಅವರ ಜೀವನದ ಪರಿಸ್ಥಿತಿ ಆಯೋಮಯವಾಗಿದೆ. ನಾಯಕ–ನಾಯಕಿಯ ಪರಿಸ್ಥಿತಿ ತುಂಬಾ ಚೆನ್ನಾಗಿದೆ ಖಳನಾಯಕ, ಹಾಸ್ಯನಟ, ಪೋಷಕ ಪಾತ್ರ, ಕಾರ್ಮಿಕರ ಪರಿಸ್ಥಿತಿ ತುಂಬಾ ಶೋಚನೀಯವಾಗಿದೆ. ಅವರ ಭತ್ಯೆ ವಿಚಾರಕ್ಕೆ ಬಂದರೆ ನಾಯಕ ನಟ ನಟಿಯರಿಗೆ ಸಿಗುವ ಸಂಭಾವನೆಗಿಂತ ಇತರೆ ಪಾತ್ರ ನಿರ್ವಹಿಸುವವರ ಭತ್ಯೆ ತುಂಬಾ ಕಡಿಮೆಯಿರುತ್ತದೆ. ಪತ್ರಿಕೆ ದೃಶ್ಯ ಮಾಧ್ಯಮಗಳಲ್ಲಿ ನೋಡಿರುವಂತೆ ಅವರು ಅನಾರೋಗ್ಯಕ್ಕೆ ತುತ್ತಾಗಿ ಆಸ್ಪತ್ರೆ ಸೇರಿದಾಗ ಅವರ ವೈದ್ಯಕೀಯ ಚಿಕಿತ್ಸೆ ವೆಚ್ಚ ಭರಿಸಲು ಹೆಣಗಾಡುವ ಪರಿಸ್ಥಿತಿಯನ್ನು ನಾವು ಕಣ್ಣಾರೆ ಕಂಡಿದ್ದೇವೆ.

ಎಸ್. ನಾರಾಯಣ್ ಅವರು ನಿರ್ದೇಶನದ ಚಿತ್ರಗಳಲ್ಲಿ ಮುಖ್ಯವಾಗಿ ಸಾಮಾಜಿಕ ಸಂದೇಶ ರವಾನಿಸುವಲ್ಲಿ ಯಶಸ್ವಿಯಾಗಿದ್ದಾರೆ, ಎಂಬುವುದರಲ್ಲಿ ಎರಡು ಮಾತಿಲ್ಲ ನಾವು ಅವರ ಎಲ್ಲಾ ಸಿನಿಮಾಗಳಲ್ಲಿ ವೀಕ್ಷಿತ ಬಹುತೇಕ ಸಿನಿಮಾಗಳಲ್ಲಿ ಸಾಮಾಜಿಕ ಸಂದೇಶಗಳನ್ನು ರವಾನೆಯಾಗುತ್ತವೆ.

ಇಂದಿನ ಆಧುನಿಕ ಜೀವನ ಶೈಲಿಯಲ್ಲಿ ಒತ್ತಡದ ಜೀವನದ ಜಂಜಾಟದಲ್ಲಿ ಇಂಟರ್ನೆಟ್ಟು ಫೇಸ್ಬುಕ್ಕು ವಾಟ್ಸಾಪ್ ಯೂಟ್ಯೂಬ್ ಟ್ವಿಟರ್‌ಗಳಂತಹ ಸಾಮಾಜಿಕ ಮಾಧ್ಯಮಗಳಲ್ಲಿ ಇಂದಿನ ಯುವಕ ಯುವತಿಯರು ಹೆಚ್ಚು ಬಳಸುವುದರ ಜೊತೆಗೆ ತಮ್ಮ ಪಾಡಿಗೆ ಮೊಬೈಲ್ ಜಗತ್ತಿನಲ್ಲಿ ಮುಳುಗಿರುತ್ತಾರೆ. ವಿಡಿಯೋ ಆನ್ಲೈನ್ ಗೇಮ್‌ಗಳಲ್ಲಿ ಮಕ್ಕಳು ಮುಳುಗಿದ್ದಾರೆ. ಯುವಕ–ಯುವತಿಯರು ಕಂಪ್ಯೂಟರ್ ಜಗತ್ತಿನ ಮುಂದೆ ಮಲಗಿದ್ದಾರೆ ಹಿರಿಯರು ಚಟಗಳಿಗೆ ದಾಸರಾಗಿ ಬಾರ್, ಪಬ್‌ಗಳಲ್ಲಿ ತಮ್ಮ ಅಂತಿಮ ದಿನಗಳನ್ನು ಎಣಿಸುವಲ್ಲಿ ಮಗ್ನರಾಗಿದ್ದಾರೆ. ಹಾಗಾಗಿ ಪ್ರಸ್ತುತ ಆಧುನಿಕ ಮಾಧ್ಯಮಗಳ ಪ್ರಭಾವದಿಂದ ಚಲನಚಿತ್ರಗಳ ಕಲೆ ಕ್ಷೀಣಿಸುತ್ತಿದೆ.

ಸಿಂಹಾದ್ರಿಯ ಸಿಂಹ ಚಲನಚಿತ್ರದಲ್ಲಿ ಮನೆತನದ ಗೌರವವನ್ನು ಕಾಪಾಡಿಕೊಂಡು ಹೋಗುವುದರ ಬಗ್ಗೆ ತಿಳಿಸುತ್ತದೆ. ಎಲ್ಲರೂ ಸಹ ಪ್ರೀತಿ–ಗೌರವ ವಿಶ್ವಾಸದಿಂದ ಇರಬೇಕು. ಪ್ರತಿಯೊಬ್ಬರೂ ನ್ಯಾಯಯುತವಾಗಿ ಇರಬೇಕು ಎಂಬುದನ್ನು ಸಮಾಜಕ್ಕೆ ತಿಳಿಸುತ್ತದೆ. ಸೂರ್ಯವಂಶ ಚಲನಚಿತ್ರದಲ್ಲಿಯೂ ಸಹ ಸ್ನೇಹ ಪ್ರೀತಿ ಗೌರವ ಬಾಂಧವ್ಯ ಕಂಡುಬರುತ್ತದೆ ಇಲ್ಲಿ ನ್ಯಾಯವು ಎಲ್ಲರಿಗೂ ಸಮಾನವಾಗಿರಬೇಕು ಎಂಬುದನ್ನು ತಿಳಿಸುತ್ತದೆ.

**ಸಿಂಹಾದ್ರಿಯ ಸಿಂಹ**

ಎಸ್ ನಾರಾಯಣ್ ನಿರ್ದೇಶನದ ಈ ಚಿತ್ರವನ್ನು ಕೆ.ವಿ.ನಾಗೇಶ್ ಕುಮಾರ್ ಮತ್ತು ಶ್ರೀಮತಿ ಪ್ರಭಾವತಿ ವಿಜಯಕುಮಾರ್ ನಿರ್ಮಿಸಿದ್ದಾರೆ. ಈ ಚಿತ್ರದಲ್ಲಿ ಡಾ. ವಿಷ್ಣುವರ್ಧನ್, ಮೀನಾ, ಭಾನುಪ್ರಿಯ, ಶೋಭರಾಜ್, ಅಭಿಜಿತ್, ಮುಖ್ಯಮಂತ್ರಿ  ಚಂದ್ರು, ಕೀರ್ತಿರಾಜ್, ಶಿವರಾಂ, ಎಸ್. ಉಮೇಶ್ ಇತರರು ಅಭಿನಯಿಸಿದ್ದಾರೆ. ಈ ಚಿತ್ರದ ಚಿತ್ರಕಥೆ, ಸಂಭಾಷಣೆ, ಹಾಡುಗಳು, ನಿರ್ದೇಶನ ಕಲಾಸಾಮ್ರಾಟ್ ಎಸ್. ನಾರಾಯಣ್ ಅವರದು. ಈ ಸಿನಿಮಾದಲ್ಲಿ ಹಳ್ಳಿಯ ಸಂಸ್ಕೃತಿಯನ್ನು ಅನಾವರಣಗೊಳಿಸಿದ್ದಾರೆ ಹಳ್ಳಿಯಲ್ಲಿ ನಡೆಯುವ ಘಟನೆಗಳನ್ನು ತೋರಿಸಿದ್ದಾರೆ. ಈ ಚಿತ್ರದಲ್ಲಿ ಗೌಡರ ತೀರ್ಪಿನಂತೆ ಹಳ್ಳಿಯ ಜನರು ಗೌರವದಿಂದ ನಡೆದುಕೊಳ್ಳುತ್ತಾರೆ. ಊರಿನಲ್ಲಿ ಯಾವುದೇ ತೊಂದರೆಯಾದರೂ ಪರಿಹಾರಕ್ಕಾಗಿ ಜನರು ಗೌಡರ ಬಳಿ ಹೋಗುತ್ತಾರೆ ಅವರ ತೀರ್ಮಾನವೇ ಅಂತಿಮ ತೀರ್ಪು. ಈ ಸಿನಿಮಾವನ್ನು ಪಂಚಾಯ್ತಿಯಲ್ಲಿ ತೀರ್ಪು ನೀಡುವುದರ ಮೂಲಕ ಪ್ರಾರಂಭಿಸಿದ್ದಾರೆ ವಿಷ್ಣುವರ್ಧನ್ ಅವರು ಇಲ್ಲಿ ಮೂರು ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಗೌಡರ ಪತ್ನಿಯಾಗಿ ನಟಿಸಿರುವ ಮೀನ ಅವರು ಗಂಡನ ಮಾತಿನಂತೆಯೇ ನಡೆದುಕೊಳ್ಳುತ್ತಾರೆ ಹಾಗೂ ಅವರ ತಮ್ಮಂದಿರಾಗಿ ಅಭಿನಯಿಸಿರುವ ವಿಷ್ಣುವರ್ಧನ್ ಮತ್ತು ಅಭಿಜಿತ್ ನಟಿಸಿದ್ದಾರೆ. ಅಣ್ಣನೆಂದರೆ ತಮ್ಮಂದಿರಿಗೆ ಅಪಾರವಾದ ಪ್ರೀತಿ ಮತ್ತು ಗೌರವ ಎಂದಿಗೂ ಅಣ್ಣನ ಮಾತನ್ನು ತಪ್ಪುವುದಿಲ್ಲ.

ಮತ್ತೊಂದು ದೃಶ್ಯದಲ್ಲಿ ಗೌಡರು ತನ್ನ ತಮ್ಮನಿಗೆ ಹೆಣ್ಣು ನೋಡುತ್ತಾರೆ ಹುಡುಗಿಯ ಫೋಟೋವನ್ನು ನೋಡಲು ಹೇಳಿ ಮನೆಯಿಂದ ಹೊರಡುತ್ತಾರೆ ತಮ್ಮಂದಿರು ಹಾಗೂ ಗೌಡರ ಹೆಂಡತಿ ಫೋಟೋ ತೆಗೆದುಕೊಳ್ಳಲು ಹೋಗಿ ಹರಿದು ಹಾಕುತ್ತಾರೆ ಆಗ ಚಿಕ್ಕಣ್ಣ ಫೋಟೋವನ್ನು ಜೋಡಿಸಿ ಹುಡುಗಿಯನ್ನು ನೋಡಿ ಸಂತೋಷಪಡುತ್ತಾನೆ ಆಗ ಅವಳ ಅಂದವನ್ನು ಹೊಗಳುವ ಗೀತೆ ಪ್ರಸಾರವಾಗುತ್ತದೆ.

ಅಣ್ಣ ಕರೆದ ಎಂಬ ಕಾರಣಕ್ಕೆ ಚಿಕ್ಕ ಅವಸರದಿಂದ ಹೋಗುವಾಗ ಅವನ ಹೆಂಡತಿಗೆ ಡಿಕ್ಕಿ ಹೊಡೆಯುತ್ತಾನೆ ಅಣ್ಣನ ಮುಂದೆ ಕೈಕಟ್ಟಿ ನಿಲ್ಲುತ್ತಾನೆ ಆಗ ಅವನ ಹೆಂಡತಿ ನಾನು ಬರುವುದನ್ನು ನೋಡದೆ ನಿಮ್ಮ ಅಣ್ಣನ ಮುಂದೆ ಹೋಗಿ ನಿಂತು ಕೊಳ್ಳುತ್ತಿರಲಿಲ್ಲ ನೀವು ಅವರ ತಮ್ಮನ ಅಥವಾ ಅವರ ಗುಲಾಮನ ಎಂದು ಕೇಳುತ್ತಾಳೆ. ಆಗ ಅವನು ಅಣ್ಣನ ಮುಂದೆ ನಿಲ್ಲುವುದು ತಪ್ಪೇನು ಎಂದು ಕೇಳುತ್ತಾನೆ. ನಾನು ಕೋಟ್ಯಾಧೀಶ್ವರನ ಮಗಳು ನನ್ನ ಗಂಡ ಬೇರೆಯವರ ಮುಂದೆ ತಲೆತಗ್ಗಿಸಿ ನಿಲ್ಲುವುದನ್ನು ನಾನು ಹೇಗೆ ಸಹಿಸಿಕೊಳ್ಳಲಿ ಎಂದು ಹೇಳುತ್ತಾಳೆ. ಆಗ ಚಿಕ್ಕ ತಮಾಷೆ ಮಾಡಿ ಮಾತು ಮರೆಸುತ್ತಾನೆ, ನಂತರ ಚಿಕ್ಕಣ್ಣನ ಹೆಂಡತಿ ಬನ್ನಿ ನನ್ನ ಗೆಳತಿಯ ಮನೆಗೆ ಹೋಗಿ ಬರೋಣ ಎನ್ನುತ್ತಾಳೆ, ಆಗ ಚಿಕ್ಕ ಅಣ್ಣನನ್ನು ಕೇಳಬೇಕಿತ್ತು

ಎನ್ನುತ್ತಾನೆ, ಇದನ್ನೂ ನಿಮ್ಮಣ್ಣನನ್ನೆ ಕೇಳಬೇಕೆ ಎನ್ನುತ್ತಾಳೆ. ನಮಗೆಲ್ಲ ಅಣ್ಣನೇ ಅವರನ್ನು ಬಿಟ್ಟರೆ ಈ ಜಗತ್ತಿನಲ್ಲಿ ನಮಗೆ ಏನು ಗೊತ್ತಿಲ್ಲ ಎನ್ನುತ್ತಾನೆ.

ಚಿಕ್ಕಣ್ಣ ಟೀಚರ್ ಅಮ್ಮನ ಮನೆಗೆ ಕೆಲಸದ ಮೇಲೆ ಹೋಗಿರುತ್ತಾನೆ, ಆಕೆ ಚಿಕ್ಕಣ್ಣನ ಮೇಲೆ ಬೀಳುತ್ತಾಳೆ ವಿದ್ಯೆ ಕಲಿಸುವುದಕ್ಕೆ ಬಂದಿದ್ದೀರಾ ಆ ವೃತ್ತಿಗೆ ಕಳಂಕ ತರಬೇಡಿ ಎಂದು ಹೊರಡುತ್ತಾನೆ. ಮತ್ತೊಂದು ಸಂದರ್ಭದಲ್ಲಿ ಲಕ್ಷ್ಮಿ ಮತ್ತು ದೀಪ ಇಬ್ಬರು ದೇವಸ್ಥಾನಕ್ಕೆ ಹೋಗಿರುತ್ತಾರೆ ಅರಳಿಮರ ಇರುವುದನ್ನು ನೋಡಿ ದೀಪ, ಲಕ್ಷ್ಮಿಯನ್ನು ಅಕ್ಕ ಇದು ಏನು ಎಂದು ಕೇಳುತ್ತಾಳೆ. ಲಕ್ಷ್ಮಿ ಮಕ್ಕಳಾಗದೇ ಇರೋರು ಇದನ್ನು ಕಟ್ಟುತ್ತಾರೆ ಎಂದು ಹೇಳಿ ನೀನು ಕಟ್ಟು ಎಂದು ಹೇಳುತ್ತಾಳೆ ಪ್ರತಿಯಾಗಿ ದೀಪ ಅಯ್ಯೋ ನನಗ್ಯಾಕೆ ನೀವೇ ಕಟ್ಟಿ ನಿಮಗೆ ತಾನೇ ಮಕ್ಕಳಿಲ್ಲ ಎಂದು ಅವಳ ಮನಸ್ಸಿಗೆ ನೋವುಂಟು ಮಾಡುತ್ತಾಳೆ. 18 ವರ್ಷ ಊರಿನಿಂದ ಆಚೆ ಇಟ್ಟ ಗೌಡರ ಅಕ್ಕ ದೇವಸ್ಥಾನದ ಬಳಿ ಬಂದಿರುತ್ತಾಳೆ. ಗೌಡರು ಮತ್ತು ಅವನ ಹೆಂಡತಿ ನೋಡುತ್ತಾರೆ ತಲೆಸುತ್ತಿ ಬೀಳುತ್ತಾಳೆ ಅದನ್ನು ನೋಡಿ  ಗೌಡರು ಅಸಹಾಯಕರಾಗಿ ನಿಲ್ಲುತ್ತಾರೆ ಆಗ ಚಿಕ್ಕ ಉಪಾಯದಿಂದ ಪೂಜಾರಿ  ಪೂಜೆ ಮಾಡುವುದಕ್ಕೆ ಬಿಂದಿಗೆಯಲ್ಲಿ ತರುತ್ತಿದ ನೀರಿನ ಕೊಡವನ್ನು ಹೊರಳಿಸಿ ಆಕೆಗೆ ನೀರು ನೀಗಿಸುವಂತೆ ಮಾಡುತ್ತಾನೆ, ನಂತರ ಮನೆಯಲ್ಲಿ ಒಂದು ದಿನ ಗೌಡರು ದೀಪಳಿಗೆ ಕುಡಿಯಲು ನೀರು ಕೇಳುತ್ತಾರೆ ಆಗ ದೀಪ  ನಾನೇನು ನಿಮ್ಮನೆ ಕೆಲಸದವಳ ಇಲ್ಲ ನಿಮ್ಮ ತಮ್ಮನ, ನೀವು ಕರೆದ ತಕ್ಷಣ ನಿಮ್ಮ ಮುಂದೆ ಕೈಕಟ್ಟಿ ನಿಲ್ಲಲು, ನಾನು ಕೋಟ್ಯಾಧೀಶ್ವರನ ಪುಟ್ಟೇಗೌಡರ ಒಬ್ಬಳೇ ಮಗಳು ನಾನು ಚಿಟಿಕೆ ಹೊಡೆದರೆ ನೂರು ಜನ ನನ್ನ ಮುಂದೆ ಬಂದು ನಿಲ್ಲುತ್ತಾರೆ, ಎಷ್ಟು ಧೈರ್ಯ ನಿಮಗೆ ನನ್ನನ್ನು ನೀರು ಕೊಡು ಅಂತ ಕೇಳೋಕೆ ವಯಸ್ಸಾದರೆ ಸಾಲದು ಯಾರತ್ರ ಹೇಗೆ ಮಾತಾಡಬೇಕು ಅಂತ ವಿವೇಕ ಇರಬೇಕು ಎನ್ನುತ್ತಾಳೆ. ಆಗ ಎಲ್ಲರೂ ಗಾಬರಿಯಿಂದ ಅವಳನ್ನು ನೋಡುತ್ತಾರೆ ಅಲ್ಲಿಂದ ಅವಳು ರೂಮಿನ ಕಡೆ  ಹೋಗುತ್ತಾಳೆ.

ಲೆಕ್ಕಪತ್ರದ ಸೋಮಣ್ಣ ಸಣ್ಣವರು ತಿಳಿಯದೆ ತಪ್ಪು ಮಾಡಿದರೆ ಕ್ಷಮಿಸಿ ಎಂದು ಹೇಳುತ್ತಾನೆ, ಅದರಲ್ಲಿ ತಪ್ಪೇನಿದೆ ಎಂದು ಗೌಡರು ಹೇಳುತ್ತಾರೆ. ಗೌಡರ ಇನ್ನೊಬ್ಬ ತಮ್ಮ ವಿಶ್ವ ತನ್ನ ಅತ್ತಿಗೆಯಾದ ದೀಪಳಿಗೆ ದುಡ್ಡು ಇದ್ದ ಮಾತ್ರಕ್ಕೆ ಹೆಣ್ಣು ಗಂಡು ಆಗಲಿಕ್ಕೆ ಸಾಧ್ಯವೇ ಇಲ್ಲ ಎನ್ನುತ್ತಾನೆ, ಅವನ ಕೆನ್ನೆಗೆ ಹೊಡೆಯುತ್ತಾಳೆ. ಲಕ್ಷ್ಮಿ ಅವಳ ಮೈದುನನನ್ನು ಹೊರಗೆ ಕಳಿಸಿ ದೀಪಳಿಗೆ ಹೇಳುತ್ತಾಳೆ, ಸಿಂಹಾದ್ರಿಯ ವಂಶಕ್ಕೆ ಸೊಸೆಯಾಗಿ ಬಂದು ಒಬ್ಬ ಗಂಡು ಮಗನ ಮೇಲೆ ಕೈ ಮಾಡ್ತೀಯಲ್ಲ ನಿನಗೆ ನಾಚಿಕೆ ಆಗುವುದಿಲ್ಲವೇ ಎನ್ನುತ್ತಾಳೆ. ಅದಕ್ಕೆ ದೀಪ ಯಾವ ಮಹಾವಂಶ ಇದು ಗಂಡಸರೆಲ್ಲ ಗುಲಾಮರಾಗಿ ಇಟ್ಟುಕೊಂಡಿರುವ ವಂಶ ಅಲ್ವಾ ನಿಮ್ಮದು ಎನ್ನುತ್ತಾಳೆ, ಆಗ ಲಕ್ಷ್ಮಿ ಕೈ ಎತ್ತಿ ಹೊಡೆಯಲು ಹೋಗಿ ಸುಮ್ಮನಾಗಿ ಮಾತನಾಡುತ್ತಾ ಸತ್ಯ, ನ್ಯಾಯ, ನೀತಿ, ಧರ್ಮವನ್ನು ಹೊತ್ತುಕೊಂಡು ಬಾಳಿರುವಂತಹ ನರಸಿಂಹ ಗೌಡರ ವಂಶ ಇದು ಈ ವಂಶದ ಬಗ್ಗೆ ಎಲ್ಲರೂ ಗೌರವದಿಂದ ನಡೆದುಕೊಳ್ಳುತ್ತಾರೆ. ನೀನು ಗೌರವವನ್ನು ಕೊಡುವುದನ್ನು ಕಲಿ ಎನ್ನುತ್ತಾಳೆ.

ಅದನ್ನೆಲ್ಲ ಹೇಳೋಕೆ ನೀನ್ಯಾರು? ನಮ್ಮ ಅತ್ತೆನಾ?  ನೀನ್ ಹೇಗೆ  ಈ ಮನೆಗೆ ದೀಪ ಹಚ್ಚುವುದಕ್ಕೆ ಬಂದಿದ್ದೀಯಾ ಹಾಗೆ ನಾನು ಬಂದಿದ್ದೇನ. ಲಕ್ಷ್ಮಿ ಹೇಳುತ್ತಾಳೆ ಬರಿ ಓದಿದರೆ ಸಾಲದು ನಮ್ಮ ಸಂಸ್ಕೃತಿ ಬಗ್ಗೆ ಗೌರವವನ್ನು  ಇಟ್ಟುಕೊಂಡಿರಬೇಕು ಎಂದು ಒಂದಿಷ್ಟು ಇಂಗ್ಲಿಷ್ನಲ್ಲಿ ಜಿದ್ದಾಜಿದ್ದಿ ನಡೆಸುತ್ತಾರೆ. ನಂತರ ಲಕ್ಷ್ಮಿ

ಎಷ್ಟು ದುಡ್ಡು ಇದ್ದರೆ ಏನು ಬಂತು ಸತ್ತಾಗ ಎಲ್ಲ ಕಿತ್ಕೊಂಡು ಕಳಿಸುವುದು ಎಂದು ಬುದ್ಧಿಮಾತನ್ನು ಹೇಳುತ್ತಾಳೆ, ಇದನ್ನೆಲ್ಲ ಮರೆಯಲ್ಲಿ ನಿಂತು ಚಿಕ್ಕಣ್ಣ ಕೇಳಿಸಿಕೊಳ್ಳುತ್ತಾ ಇರುತ್ತಾನೆ, ದೀಪ ತನ್ನ ಗಂಡನ ಹತ್ತಿರ ಬಂದು ಚಾಡಿ ಹೇಳುತ್ತಾಳೆ ನಮ್ಮ ಅತ್ತಿಗೆ ಮಾಡಿರುವುದಕ್ಕೆ ಸಾಧ್ಯನೇ ಇಲ್ಲ ಅವರಿಗೆ ಕೋಪ ಬಂದಿದೆ ಅಂದರೆ ನೀನೇನೋ ತಪ್ಪು ಮಾಡಿರಬೇಕು ಎಂದು ಹೇಳಿ ಹೋಗುತ್ತಾನೆ, ದೀಪ ನಿಮ್ಮ ಹೆಂಡತಿಗಿಂತ ನಿಮ್ಮ ಅತ್ತಿಗೆನೆ ಹೆಚ್ಚ ನನಗೆ ಇಷ್ಟೆಲ್ಲಾ ಆದಮೇಲೆ ಈ ಮನೆಯಲ್ಲಿ ನಾನು ಇರುವುದಿಲ್ಲ ಎಂದು ಮನೆ ಬಿಟ್ಟು ಹೋಗಲು ನಿರ್ಧರಿಸುತ್ತಾಳೆ.

ಆಗ ಗೌಡರು ಮನೆಯ ವಿಷಯ ಕಂಡೋರ ಬಾಯಿಗೆ ಸಿಕ್ರೆ ಅಷ್ಟೇ! ಬುದ್ಧಿಮಾತು ಹೇಳಿ ಒಳಗೆ ಕರೆದುಕೊಂಡು ಹೋಗು ಎಂದು ಚಿಕ್ಕಣ್ಣನಿಗೆ ಹೇಳುತ್ತಾರೆ. ಚಿಕ್ಕ ತಿಳಿವಳಿಕೆ ಇರೋರಿಗೆ ಬುದ್ಧಿ ಹೇಳಬಹುದು ಇಂಥವರಿಗೆ ಹೇಳಲಿಕ್ಕಾಗುವುದಿಲ್ಲ ಎನ್ನುತ್ತಾನೆ. ಆಗ ಗೌಡರು ಹೆಂಡತಿ ಏನು ಎಂಬುದರ ಬಗ್ಗೆ ತಿಳಿಸುತ್ತಾರೆ. ನಂತರ ಮನೆಯ ಆಸ್ತಿ ಪತ್ರಗಳನ್ನೆಲ್ಲ ಅವಳ ಕೈಯಲ್ಲಿ ಇಟ್ಟು ಮನೆಯ ಅಧಿಕಾರವನ್ನು ಅವಳಿಗೆ ವಹಿಸಿ ನಮ್ಮನ್ನು ದೂರ ಮಾಡಬೇಡಮ್ಮ ಎಂದು ಗೌಡರು ಕಣ್ಣೀರು ಹಾಕುತ್ತ ಕ್ಷಮೆ ಕೇಳಿ ಹೋಗುತ್ತಾರೆ. ಆಗ ಅವಳು ತಲೆಸುತ್ತಿ ಬಿದ್ದಾಗ ಅದು ಸಂತೋಷದ ವಿಷಯವಾಗಿರುತ್ತದೆ. ಅವಳು ತಾಯಿ ಆಗುತ್ತಿದ್ದಾಳೆ ಆ ಸಂತೋಷವನ್ನು ಹಾಡಿನ ಮೂಲಕ ತೋರಿಸುತ್ತಾರೆ ದೀಪಾಳ ತಂದೆ ಮನೆಗೆ ಬಂದು ಅವಳನ್ನು ಸರಿಯಾಗಿ ಮಾತನಾಡಿಸದೆ ಗೌಡರ ಹತ್ತಿರ ಹೋಗಿ ತಲೆತಗ್ಗಿಸಿ ಮಾತನಾಡುತ್ತಾ ಗೌರವದಿಂದ ನಡೆದುಕೊಳ್ಳುತ್ತಾನೆ. ಅನಂತರ ದೀಪಾವಳಿಗೆ ತನ್ನ ತಪ್ಪಿನ ಅರಿವಾಗಿ ತನ್ನ ಮಾವನ ಕಾಲಿಗೆ ಬಿದ್ದು ಕ್ಷಮೆ ಕೇಳುತ್ತಾಳೆ.

**ಟೀಚರ್‌ನ ಸಂಭಾಷಣೆ**

ಟೀಚರ್ ತಿರುಗಿ ಬಿದ್ದಿದ್ದಾಳೆ ಎಂಬ ಸುದ್ದಿ ಚಿಕ್ಕಣ್ಣನಿಗೆ ತಲುಪಿದ ಕೂಡಲೇ ಅವನು ಬರುತ್ತಾನೆ. ಆದರೆ ಅದು ಅವಳು ಆಡಿದ ನಾಟಕವೆಂದು ತಿಳಿದ ಮೇಲೆ ಹೊರಟು ಹೋಗುತ್ತಾನೆ. ಆಗ ಟೀಚರ್ ಚಿಕ್ಕ ನನ್ನ ಹಾಳು ಮಾಡಿದ ಎಂದು ಅಪವಾದ ಹೊರಿಸುತ್ತಾಳೆ, ಜನರು ಯಾರು ಆಕೆಯ ಮಾತನ್ನು ನಂಬುವುದಿಲ್ಲ ಪ್ರತಿಯಾಗಿ ಅವಳನ್ನೇ ನಿಂದಿಸುತ್ತಾರೆ. ನಂತರ ಶೋಭರಾಜ್‌ಗೆ ತನ್ನ ಅಸಹಾಯಕತೆಯನ್ನು ತೋಡಿಕೊಳ್ಳುತ್ತಾಳೆ ಹಾಗೂ ಚಿಕ್ಕಣ್ಣನ ಮೇಲೆ ಅಪವಾದ ಹೊರಿಸಲಾರೆ ಎನ್ನುತ್ತಾಳೆ. ಈ ಸಂದರ್ಭವನ್ನು ಬಳಸಿಕೊಳ್ಳುವ ಶೋಭರಾಜ್ ನನ್ನ ಸಾವಿಗೆ ಚಿಕ್ಕಣ್ಣನ ಕಾರಣ ಎಂದು ಬರೆದು ನೇಣುಹಾಕಿ ಟೀಚರ್‌ಳನ್ನು ಕೊಲ್ಲುತ್ತಾನೆ. ಚಿಕ್ಕಣ್ಣನ ಅಣ್ಣನಾದ ಗೌಡರು ಪಂಚಾಯಿತಿ ಸೇರಿಸುತ್ತಾರೆ ಗೌಡರು ಹೋಗುವ ಸಂದರ್ಭದಲ್ಲಿ ತನ್ನ ಅಪ್ಪನನ್ನು ನೆನಪಿಸಿಕೊಳ್ಳುತ್ತಾರೆ. ಗೌಡರು ಚಿಕ್ಕಣ್ಣನನ್ನು ಊರಿನಿಂದ ಬಹಿಷ್ಕಾರ ಹಾಕುವ ತೀರ್ಪನ್ನು ನೀಡುತ್ತಾರೆ. ಆದರೆ ಗೌಡರಿಗೆ ಚಿಕ್ಕಣ್ಣ ತಪ್ಪು ಮಾಡಿರುವುದಿಲ್ಲ ಎಂಬ ಅರಿವಿರುತ್ತದೆ. ಆದರೂ ಸಿಕ್ಕ ಸಾಕ್ಷ್ಯಗಳ ಆಧಾರದಲ್ಲಿ ಈ ರೀತಿಯ ಶಿಕ್ಷೆಯನ್ನು ಪ್ರಕಟಿಸುತ್ತಾರೆ.

**ಸಿಂಹಾದ್ರಿಯ ಕಥೆ**

ಸುತ್ತಲೂ ಸಾವಿರ ಸಿಂಹಗಳ ಜೊತೆಯಲ್ಲಿ ಬರುವವನು ಈ ಸಿಂಹಾದ್ರಿ ತೀರ್ಪು ಕೊಟ್ಟರೆ ಎಂಟಳ್ಳಿ ಗುಡುಗುತ್ತದೆ. ರಾಜಕೀಯ ವ್ಯಕ್ತಿಯೊಬ್ಬ ರೈತರ ಜಮೀನನ್ನು ಖರೀದಿಸಲು ಬಂದಾಗ ಸಿಂಹಾದ್ರಿ ವಾಪಸ್ಸು ಕಳುಹಿಸುತ್ತಾನೆ. ಆಗ ಮಂತ್ರಿಯೇ ಸಿಂಹಾದ್ರಿಯನ್ನು ಕಾಣಲು ಮನೆಗೆ ಬರುತ್ತಾನೆ. ಆದರೆ ಮಂತ್ರಿಯ

ಜೊತೆಗೆ ಬರುವ ಪೊಲೀಸರು ಸಿಂಹಾದ್ರಿ ಕೋಟೆಯೊಳಗೆ ಬರುವುದಿಲ್ಲ. ಮಂತ್ರಿಯು ಆ ಮಾತುಗಳನ್ನು ಲೆಕ್ಕಿಸದೆ ಸಿಂಹಾದ್ರಿಯ ಮನೆ ಮುಂದೆ ಹೋಗಿ ನಿಲ್ಲುತ್ತಾನೆ, ಆಗ ಸಿಂಹಾದ್ರಿ ಅವರನ್ನು ಹೊರಗೆ ನಿಲ್ಲಿಸಿ ರೈತರ ಜಮೀನನ್ನು ಕೇಳುವುದು ನಿಮಗೆ ಅಧಿಕಾರವಿಲ್ಲ ಎಂದು ಹೇಳುತ್ತಾನೆ, ಮಂತ್ರಿ ತಾನು ನಾಯಿಗಳನ್ನು ಸಿಂಹದಂತೆ ಸಾಕಿರುವುದಾಗಿ ಗರ್ವದಿಂದ ಹೇಳುತ್ತಾನೆ. ಆಗ ಸಿಂಹಾದ್ರಿ ತಾನು ಸಾಕಿರುವ ಸಿಂಹವನ್ನೇ ಗೆಳೆಯ ಎಂದು ಕರೆದು ಅವನಿಗೆ ಭಯ ಪಡಿಸುತ್ತಾನೆ. ಒಬ್ಬ ಮಂತ್ರಿ ಅವಮಾನ ಮಾಡುತ್ತೀರಾ ಎಂದು ಕೋಪದಿಂದ ಹೇಳುತ್ತಾನೆ. ಅದಕ್ಕೆ ಸಿಂಹಾದ್ರಿ ನೀನು ಮಂತ್ರಿ ಆದ್ರೆ ನಾನು ರಾಜ ಎಂದು ಹೆಮ್ಮೆಯಿಂದ ಹೇಳಿ ಅಲ್ಲೇ ಮರೆಯಲ್ಲಿ ನಿಂತಿದ್ದ ಭಿಕ್ಷುಕನನ್ನು ಎಲೆಕ್ಷನ್ಗೆ ನಿಲ್ಲಿಸುತ್ತಾನೆ. ಅವನನ್ನು ಚುನಾವಣೆಯಲ್ಲಿ ಗೆಲ್ಲಿಸುತ್ತಾರೆ ಮಂತ್ರಿಯಾಗಿ ಅಧಿಕಾರ ಸ್ವೀಕರಿಸುತ್ತಾನೆ. ಆ ಭಿಕ್ಷುಕನ ಮಗಳೇ ಸಿಂಹಾದ್ರಿ ವಂಶದ ಸೊಸೆಯಾದ ದೀಪ.

**ಹೆಣ್ಣು ನೋಡಲು ಹೋದಾಗ ಸಂಭಾಷಣೆಯ ಸಂದರ್ಭ**

ಸಿಂಹಾದ್ರಿ ತನ್ನ ಮಗನಿಗೆ ಹೆಣ್ಣು ನೋಡಲು ತನ್ನ ಕುಟುಂಬದೊಂದಿಗೆ ಹೋಗುತ್ತಾನೆ. ಹೆಣ್ಣನ್ನು ನೋಡಿ ಸಿಂಹಾದ್ರಿ ತಂಗಿ ಉಮಾಶ್ರೀ ಹೆಣ್ಣನ್ನು ನೋಡಿ ಇದೇನವ್ವ ನಿನ್ನ ಮೂಗು ಅಂಟಿಕೊಂಡಿದೆ, ನಿನ್ನ ಹಲ್ಲು ತುರೆಮಣೆ ಇದ್ದಹಾಗೆ ಇದೆ ಎಂದು ಹೇಳುತ್ತಾಳೆ. ಆದರೆ ಸಿಂಹಾದ್ರಿ ಹಾಗೆ ಒಂದು ಪದ ಬಿಡು ಮೊಗ ಎಂದಾಗ ಅವಳು ಬರೀ ರಾಗವನ್ನೇ ದೀರ್ಘವಾಗಿ ಹೇಳುತ್ತಾಳೆ ಇದೇನವ್ವ ಬರಿ ರಾಗವನ್ನೇ ಹೇಳ್ತೀಯಲ್ಲ ಒಂದು ಪದಕಟ್ಟಿ ಹೇಳು ಎಂದು ಸೂಚನೆ ನೀಡುತ್ತಾನೆ ಅದಕ್ಕೆ ಅವಳು ನನಗೆ ಪದ ಹೇಳೋಕೆ ಬರುವುದಿಲ್ಲ ಎಂದು ಹೇಳುತ್ತಾಳೆ ಆಗ ಸಿಂಹಾದ್ರಿಯೇ ಏನವ್ವ ಮೈಸೂರು ಎಲೆ, ಮಲ್ನಾಡ್ ಅಡಿಕೆ ಇಲ್ಲೆ ಇದೆ ಇದನ್ನೇ ಪದವನ್ನಾಗಿ ಕಟ್ಟು ಹಾಡು ಎಂದು 'ಮಲ್ನಾಡ್ ಅಡಿಕೆ ಮೈಸೂರು ವೀಳ್ಯದೆಲೆ' ಕೂಡಿದರೆ ತಂಪು ಎಂಬ ಹಾಡು ಪ್ರಾರಂಭವಾಗುತ್ತದೆ.

ಸಿಂಹಾದ್ರಿ ತಂಗಿ ಗಿರಿಜವ್ವನ ಮಗ ಶೋಭರಾಜ್ ಒಂದು ಹುಡುಗಿಯನ್ನು ಹಾಳು ಮಾಡಿರುತ್ತಾನೆ. ಅದನ್ನು ಪುಟ್ಟ ಹುಡುಗ ನೋಡಿರುತ್ತಾನೆ. ಈ ವಿಷಯ ಪಂಚಾಯಿತಿ ಆಗುತ್ತದೆ ಆಗ ಮನೆಯಿಂದ ಸಿಂಹಾದ್ರಿ ಹೊರಡುವಾಗ ತನ್ನ ತಂಗಿಯ ಗಂಡ ಹೇಳುತ್ತಾನೆ ನನ್ನ ಮಗನನ್ನು ಯಾವುದೇ ತಪ್ಪು ಮಾಡಿಲ್ಲ ಎಂದು ತೀರ್ಪು ಕೊಡಿ ಎಂದು ಕೇಳುತ್ತಾನೆ, ಸಿಂಹಾದ್ರಿ ಪಂಚಾಯ್ತಿಯಲ್ಲಿ ಕುಟುಂಬವೇ ಇರಲಿ ಅಥವಾ ಬೇರೆಯೇ ಇರಲಿ ಎಲ್ಲರಿಗೂ ನ್ಯಾಯ ಒಂದೇ ಎಂದು ಹೇಳಿ ಮನೆಯಿಂದ ಬರುತ್ತಾರೆ. ಪಂಚಾಯಿತಿ ಆಗುತ್ತದೆ ಗೌಡ ಸಾಕ್ಷಿಯನ್ನು ಕೇಳಿದಾಗ ಹಾಳಾದ ಹುಡುಗಿಯ ಅನೇಕ ಚಿಕ್ಕಮ್ಮ ದೊಡ್ಡಪ್ಪ ಅವರೆಲ್ಲರೂ ಸಾಕ್ಷಿ ಹೇಳುತ್ತಾರೆ ಆದರೆ ಪಂಚಾಯಿತಿಯಲ್ಲಿ ಅವರ ಸಾಕ್ಷಿ ನಡೆಯುವುದಿಲ್ಲ ಆಗ ಒಬ್ಬ ಹುಡುಗನು ಸಾಕ್ಷಿ ಹೇಳುತ್ತಾನೆ. ನಾನೇ ನೋಡಿದ್ದು ಒಡೆಯ ಎಂದಾಗ ಅವನಿಗೆ ಅವಳನ್ನು ಕೊಟ್ಟು ಮದುವೆ ಮಾಡುತ್ತಾನೆ ಆ ತೀರ್ಪನ್ನು ಶೋಭಾರಾಜ್ ಮರೆಯುವುದಿಲ್ಲ ಜಾತಿ–ಜಾತಿಗಳ ವಿವಾದವಾಗುತ್ತದೆ. ತನ್ನ ತಂಗಿಯ ಗಂಡನೇ ಸಿಂಹಾದ್ರಿಯನ್ನು ಗುಂಡಿಕ್ಕಿ ಕೊಲ್ಲುತ್ತಾನೆ ಆಗ ಅವನನ್ನು ಊರಿನ ಜನ ಹೊಡೆಯುತ್ತಾರೆ ಆಗ ಸಾಯುವ ಸಂದರ್ಭದಲ್ಲಿ ಅವರನ್ನು 18 ವರ್ಷ ಊರಿನಿಂದ ಬಹಿಷ್ಕಾರ ಹಾಕುತ್ತಾನೆ. ಇದೆ ಈ ಸಿಂಹಾದ್ರಿ ನರಸಿಂಹ

ಕೊಡುತ್ತಿರುವ ತೀರ್ಪು ಎಂದು ಹೇಳುತ್ತಾನೆ, ತನ್ನ ಮಗನನ್ನು ಇನ್ನು ಮುಂದೆ ನೀನೇ ಊರಿನ ನರಸಿಂಹ ಎಂದು ಹೇಳಿ ಕಣ್ಮುಚ್ಚುತ್ತಾನೆ.

ಬಹಿಷ್ಕಾರದಿಂದ ಶೋಭರಾಜ್ ಸಿಂಹಾದ್ರಿ ವಂಶದ ಮೇಲೆ ದ್ವೇಷ ಕಾರುತ್ತಾನೆ. ಹಾಗೂ ತನ್ನ ತಾಯಿ ಹಾಗೂ ಗೌಡರ ತಂಗಿಯೂ ಆದ ಉಮಾಶ್ರೀಯನ್ನು ಹಾಗೂ ತಳಸಮುದಾಯಕ್ಕೆ ಸೇರಿದ ತನ್ನ ಪತ್ನಿಯನ್ನು ನಿಂದಿಸುತ್ತಾನೆ. ಮನನೊಂದ ತಾಯಿ "ನಿನ್ನನ್ನು ಹೇರುವುದರ ಬದಲು ಬಂಜೆಯಾಗಿದ್ದರೆ ಒಳ್ಳೆಯದಾಗಿರುತ್ತಿತ್ತು" ಎಂದು ಹೇಳುತ್ತಾಳೆ. ಆಗ ಶೋಭರಾಜ್ ತನ್ನ ತಾಯಿ ಉಮಾಶ್ರೀಯನ್ನು ಹೊಡೆಯಲು ಮುಂದಾಗುತ್ತಾನೆ ಅವನ ಮಗಳು ಅಜ್ಜಿಯನ್ನು ಹೊಡೆಯಬೇಡ ಎಂದು ಗೋಗರೆದು ಬೇಡಿಕೊಳ್ಳುತ್ತಾಳೆ ಆಗ ಸುಮ್ಮನಾಗುತ್ತಾನೆ.

ಶೋಭರಾಜ್ ದ್ವೇಷದಿಂದ ತನ್ನನ್ನು ತಾನು ಬರೆಕೊಟ್ಟುಕೊಳ್ಳುವ ಮೂಲಕ ಶಿಕ್ಷೆಯನ್ನು ಕೊಟ್ಟುಕೊಳ್ಳುತ್ತಿರುತ್ತಾನೆ ಅವನ ನೋವನ್ನು ನೋಡಲಾರದೆ ಹೆಂಡತಿ ಮಕ್ಕಳು ಮತ್ತು ತಾಯಿ ಸಂಕಟಪಡುತ್ತಾರೆ. ಈ ಸಂಕಟಕ್ಕೆ ನೀವೇ ಕಾರಣ ಎಂದು ಅವರನ್ನೇ ದೂರುತ್ತಾನೆ. ಊರಲ್ಲಿ ನಡೆಯುವ ಕುಸ್ತಿ ಪಂದ್ಯಕ್ಕೆ ಶೋಭರಾಜ್ ಕರೆಸಿದ್ದ ಕುಸ್ತಿಪಟು ಜನರನ್ನು ಹೊಡೆದುಹಾಕುತ್ತಾನೆ ಇಲ್ಲಿ ಯಾರು ಗಂಡಸರಿಲ್ಲವಾ ಎಂದು ಜೋರಾಗಿ ಹೇಳುತ್ತಾನೆ ಇದಕ್ಕೆ ಗೌಡರು ಚಿಕ್ಕನನ್ನು ಕರೆಯುತ್ತಾರೆ ಆಗ ಚಿಕ್ಕ ಅವರನ್ನು ಹೊಡೆದು ನೆಲಕ್ಕೆ ಬೀಳಿಸುತ್ತಾನೆ. ಆಗ ಚಿಕ್ಕಣ್ಣನ ಸಂತೋಷಕ್ಕಾಗಿ ಗೌಡರು ಸಂಭ್ರಮದಿಂದ **"**ಕಲ್ಲಾದರೆ ನಾನು**"** ಎಂಬ ಗೀತೆಯನ್ನು ಹೇಳುತ್ತಾರೆ.

ಚಿತ್ರದ ಕೊನೆಯಲ್ಲಿ ಶೋಭ್‌ರಾಜ್ ಗೌಡರನ್ನು ಕೊಲ್ಲಲು ಹೋಗುವಾಗ ಶೋಭರಾಜ್ ತಾಯಿ ಹಾಗೂ ಚಿಕ್ಕ ಗೌಡರ ಅತ್ತೆಯಾದ ಉಮಾಶ್ರೀಯೇ ತನ್ನ ಮಗನನ್ನು ಕೊಲ್ಲುತ್ತಾಳೆ. ಚಿಕ್ಕಣ್ಣ ಬಹಿಷ್ಕಾರಕ್ಕೊಳಗಾಗಲು ತನ್ನ ಮಗನೇ ಕಾರಣ ಎಂಬ ವಿಷಯವನ್ನು ಹೇಳುತ್ತಾಳೆ.

**ಪರಾಮರ್ಶನ ಗ್ರಂಥಗಳು**


- ಹನೀಫ್, ಬಿ.ಎಂ. (2020). *ನಟಿಯರು ಬೇಕಾಗಿಲ್ಲ.* ಅನನ್ಯ ಪುಸ್ತಕಗಳು.
- ಗೋವಿಂದರಾಜು, ಸಿ.ಆರ್. (2017). *ಸಿನಿಮಾ ಸಂಕಥನ.* ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ.
- ಜೋಗಿ. (2016). *ಕಥೆ ಚಿತ್ರಕಥೆ ಸಂಭಾಷಣೆ ಜೋಗಿ.* ಸಾವಣ್ಣ ಎಂಟರ್‌ಪ್ರೈಸಸ್.
- ನಾಗೇಂದ್ರ. (2017). *ಸಿನಿಮಾ ಜಗತ್ತು.* ಶ್ರೀ ಚನ್ನಕೇಶವ ಸ್ವಾಮಿ ನಿಲಯ.
- ಪ್ರಶಾಂತ್ ನಾಯಕ್, ಜಿ. (2009). *ಕನ್ನಡ ಸಿನಿಮಾ ಲೋಕ.* ರಚನಾ ಪ್ರಕಾಶನ.
- ರಂಗನಾಥ, ಜಿ.ಎನ್. (2009). *ಪತ್ರಿಕೋದ್ಯಮ.* ಕಾಮಧೇನು ಪ್ರಕಾಶನ.
- ಶ್ರೀನಿವಾಸ್, ಪಿ.ಎನ್. (2003) *ಚಲನಚಿತ್ರ ನಿರ್ದೇಶಕ.* ಪುರೋಗಾಮ ಸಾಹಿತ್ಯ ಸಂಘ.
- ಸಿಂಹಾದ್ರಿಯ ಸಿಂಹ ಸೂರ್ಯವಂಶ ಚಿತ್ರ ವೀಕ್ಷಣೆ.